Regd. No M. 1299 SATYAVADI Founded 1917

# ಸತ್ಯವಾದಿ

ಸಂಪುಟ 30 ಸಂಚಿಕೆ 268 | ಗುರುವಾರ 19—6—47 [ಬಿಡಿ ಪ್ರತಿ 3 ಪೈ

(ಅರಮನೆ ಸಿರಸ್ತೇದಾರ್ ಎಂ. ವಿ. ಶುಭ್ರಾಯಪ್ಪನವರಿಂದ ಸ್ವೀಕರಿಸಲ್ಪಟ್ಟಿದೆ)

## ಹೊಸ ಅವಕಾಶಗಳು

(ಜೆ. ಸಿ. ಕುಮಾರಪ್ಪ)

ರಾಜಕೀಯ ಆಂದೋಳನಕ್ಕೆ ಅವಶ್ಯಕವಾದ ಗುಣ ಸಂಪತ್ತು ಬೇರೆ. ನಿರ್ಮಾಣ ಕೃತಿಗೆ ಬೇಕಾದ ಗುಣವಿಶೇಷಗಳು ಬೇರೆ. ಸಾಂಘಿಕ ಅಧ್ಯಾತ್ಮ, ಆರೋಗ್ಯ, ವಿದ್ಯಾಭ್ಯಾಸ, ಮೊದಲಾದ ನಾನಾ ಭಾಗಗಳ ಕಾರ್ಯಗಳಿಗೆ ಸಿದ್ಧನಾಗಿ ಗ್ರಾಮ ಸೇವೆಯಲ್ಲಿ ನಿರಂತರ ಜೀವಿಯನ್ನು ನಿಷ್ಠೆ ಇಡುವ ಭಾರವನ್ನು ಹೊತ್ತ ಹಾಕಿಕೊಳ್ಳುವುದಕ್ಕೆ ಮುಂಚೆ ತಕ್ಕ ತರಬೇತನ್ನು ಪಡೆದುಕೊಳ್ಳಬೇಕು. ಇನ್ನು ಕಾಲಹರಣ ಮಾಡದೆ ತಂಬೇತು ತರಗತಿಗಳನ್ನು ಆಯಾ ಸಂಘಗಳು ಏರ್ಪಾಡು ಮಾಡಬೇಕೆಂದು ತಿಳಿಸುತ್ತೇನೆ.

ಇದುವರೆಗೂ ನಿರ್ಮಾಣ ಸಂಸ್ಥೆಗಳಲ್ಲಿ ಕಾರ್ಯಪರರಾದ ಕಾಂಗ್ರೆಸ್ಸಿನವರನ್ನು ಸೇರಿಸಿಕೊಳ್ಳುತ್ತಿರಲಿಲ್ಲ. ಆದರೆ ಈಗ ಕಾಂಗ್ರೆಸ್ಸೇ ನಿರ್ಮಾಣ ಕೃತಿಯನ್ನು ಮೂಡಿ ತಿರುಗುತ್ತಿದೆಯಾದುದರಿಂದ ಗ್ರಾಮಾಭ್ಯುದಯಕ್ಕಾಗಿ ಶ್ರಮ ಮಾಡಲು ಬಯಸುವವರೆಲ್ಲರನ್ನೂ ಈ ನಿರ್ಮಾಣ ಸಂಸ್ಥೆಗಳಲ್ಲಿ ಸೇರಿಸಿಕೊಳ್ಳಬಹುದು. ಇಂದಿನಿಂದ ಸ್ವತಂತ್ರ ಭಾರತ ದೇಶದಲ್ಲಿ ಪ್ರಜಾಪ್ರಭುತ್ವ ನಿರ್ವಹಿಸುವ ತರಬೇತು, ನಿರ್ಮಾಣ ಕೃತಿಗೆ ಜನಮೆಯಾಗಬೇಕಾಗಿರುತ್ತದೆ. ಇದುವರೆಗೂ ದೇಶವು ಸ್ವರಾಜ್ಯ ಸಮರದಲ್ಲಿ ನಿರತವಾಗಿದ್ದುದರಿಂದ ಸ್ವಾರ್ಥಕ್ಕಾಗಿ ತರಾತ ನಮ್ಮ ಕರ್ತವ್ಯಗಳು ಬಹಳ ಮುಂದಿ ರಾಜಕೀಯದಲ್ಲಿ ಪ್ರವೇಶಿಸಬೇಕಾ ನಿತ್ತು. ಈಗಿ ಹೊಸ ಅವಕಾಶಗಳು ಇವರಿಗೆ ಲಭಿಸುತ್ತಿರುವ ಸಂದರ್ಭದಲ್ಲಿ ಅದೇ ಒಗೆಯಲ್ಲಿ ಉತ್ಸಾಹಶಕ್ತಿಗಳೊಂ ಬಿಗೆ ಪ್ರಜೆಗಳ ಸ್ಥಿತಿಗತಿಗಳನ್ನು ಉತ್ತಮ ಗೊಳಿಸಲು ಉದ್ಯುಕ್ತರಾಗುವರೆಂದು ಕೋರುವೆನು.

9200 ಟ್ಯೂ ಧಾನ್ಯ ಬರಲಿದೆ—

ವಾಷಿಂಗ್ಟನ್ ಜೂ 16— ಆಗಸ್ಟು ತಿಂಗಳಲ್ಲಿ 92 ಸಾವಿರ ಟ್ಯೂ ಧಾನ್ಯವು ಅಮೇರಿಕಾದಿಂದ ಭಾರತಕ್ಕೆ ಬರುವುದು.

ಹೋಟಲು ಮಾಲೀಕರಿಗೆ ಜುಲ್ಮಾನೆ—

ಬಳ್ಳಾರಿ— ಸೆಂಟ್ರಲ್ ಕೊಆಪರೇಟಿವ್ ಸ್ಟೋರ್ಸ್‌ನಿಂದ 143 ಡಬ್ಬ ಹಾಲಿನ ಪುಡಿಯನ್ನು ಕದ್ದ ಆಪಾದನೆ ಮೇಲೆ ಇಲ್ಲಿನ 8 ಮಂದಿ ಹೋಟಲು ಮಾಲೀಕರಿಗೆ ದಸ್ತಗಿರಿಯಾಗಿದೆ.

## ಸಂಸ್ಥಾನಗಳು ಸ್ವತಂತ್ರವಾಗಿರಬಹುದು

ನವದೆಹಲಿ ಜೂ 17— ಬ್ರಿಟಿಷ್ ಅಧಿಕಾರ ಮುಗಿದೊಡನೆ, ಭಾರತ ಸಂಸ್ಥಾನಗಳು ಹಿಂದೂಸ್ಥಾನದ ರಾಜ್ಯಾಂಗಕ್ಕಾಗಲೀ ಪಾಕಿಸ್ತಾನದ ರಾಜ್ಯಾಂಗಕ್ಕಾಗಲೀ ಸೇರಲು, ಅಥವಾ ಸ್ವತಂತ್ರವಾಗಿರಲು, ಪೂರ್ಣ ಸ್ವತಂತ್ರವಾಗಿರಲು ಅವೆಂದು ಲೀಗಿನ ಅಧ್ಯಕ್ಷರಾದ ಜಿನ್ನಾರು ಕೊಟ್ಟಿರುವ ಹೇಳಿಕೆಯಲ್ಲಿ ತಿಳಿಸುತ್ತಾರೆ.

## ಅರಮನೆ ಸುದ್ದಿ

ಬುಧವಾರ, ಜೂನ್ 18 1947

ಶ್ರೀಮನ್ಮಹಾರಾಜರವರು ಮಿ || ಎಲ್. ಎಫ್. ಬಿರ್ನಾ ಮತ್ತು ಮಿಸ್ ಇ ಆರ್. ಲೂಕ್ ಇವರುಗಳಿಗೆ ಭೇಟಿ ದಯಪಾಲಿಸಿದರು.

## ವಸ್ತು ಪ್ರದರ್ಶನ

ಮೈಸೂರು ಪೌಂಸಭೆ ಜುಲೈ 8 ರಿಂದ 12 ನೇ ತಾ | ವರೆಗೆ ವಸ್ತು ಪ್ರದರ್ಶನ ಕಟ್ಟಡದಲ್ಲಿ ಆರೋಗ್ಯ ಮತ್ತು ಲಲಿತ ಕಲೆ ಪ್ರದರ್ಶನವನ್ನೇರ್ಪಡಿಸಿದೆ. ವಿವರಗಳಿಗೆ ಪೌಂಸಭೆಯ ಅಧ್ಯಕ್ಷರನ್ನು ವಿಚಾರಿಸಬಹುದು.

## ರಾಜಕೀಯ ಖೈದಿಗಳು

ಹ್ಯಾಂಬರ್ಗ್ ಜೂ 16— ಆಫ್ರಿಕಾದಿಂದ ವಾಪಸ್ಸು ಬರುತ್ತಿರುವ ನಾಜೀ ಖೈದಿಗಳಿಗೆ ಬುದ್ಧಿಧ್ಯಮಣೆಯಾಗಿದೆಯೆಂದು ಪ್ರಕಟವಾಗಿದೆ.

## ಇಂದಿನ ವರ್ತಮಾನ

ನ್ಯೂಯಾರ್ಕ್ ಜೂ 17— ಗುಡ್ಡ ನಾಡು ನಾಯಕನಾದ ಶ್ರೀಮತ್ತು ಬ್ರಿಟಿಷ್ ರೊಡನೆ ಹೋರಾಡಿದ ಅಪೇಕ್ಷಕೀರನು ಹೆಚ್ಚು ಹೆಚ್ಚಾಗಿ ಬಂದೂಕ ತಯಾರಿಸುತ್ತಿರುವನೆಂದು ಹೇಳಲಾಗಿದೆ.

ನವದೆಹಲಿ ಜೂ 17— ಗಡಿನಾಡಿನಲ್ಲಿ ತೆಗೆದುಕೊಳ್ಳುವ ಕ್ರಮಗಳಿಂಡವ್ಯನ್ನು ಎದುರಿಸಲು ಮತ್ತು ಲೀಗಿನ ಚಟುವಟಿಕೆಯ ಮೇಲ್ವಿಚಾರಣೆ ನೋಡಿಕೊಳ್ಳಲು ಜನರು ಒಂದು ಸಮಿತಿಯನ್ನು ನೇಮಿಸಿದ್ದಾರೆ.

ಕೊಲಂಬೊ ಜೂ 16 — ಭಾರತೀಯ ಕೈಲುಗಳ ಮೇಲೆ ಅಪಘಡಗಳಾಗುತ್ತಿರುವುದರಿಂದ ರಾತ್ರೆ ಹೊತ್ತು ರೈಲು ಬಿಡುವುದು ನಿಲ್ಲಿಸಲಾಗಿದೆ.

ಟಾಂಲೂಕ್ ಜೂ 16 — ಎಡ್ಡಾ ನದಿಯ ತೀರದಲ್ಲಿ ಹುಗ್ಗೀ ನದಿಯಲ್ಲಿ ತೇಲುತ್ತಿದ್ದ ಬಾಂಬುಗಳು ತುಂಬಲಟ್ಟಿದ್ದ ಎರಡು ಪೆಟ್ಟಿಗೆಗಳನ್ನು ಹುಡುಗರು ಕಂಡಿದ್ದಾರೆ.

ನವದೆಹಲಿ ಜೂ 18— ಗಡಿನಾಡಿನ ಸಮಸ್ಯೆ ಬಗ್ಗೆ ಚರ್ಚೆ ನಡೆಸಲು ಗಾಂಧೀಜಿ, ಜಿನ್ನಾರು, ಗಫಾರ್ ಖಾನರು ಒಂದು ಚಿಕ್ಕ ಸಮ್ಮೇಳನ ನಡೆಸಿದರು.

ಲಾಹೋರು ಜ 17— ನಗರದ ಕೋಮುವಾರು ವಿಭಾಗದಲ್ಲಿರುವ ಒಂದು ಸ್ಥಳಕ್ಕೆ ಗುರ್ಜರವಾಲಾ ಕಾಂಗ್ರೆಸ್ ಅಧ್ಯಕ್ಷರು ಭೇಟಿಕೊಟ್ಟಾಗ ಅವರ ಮೇಲೆ ಕಲ್ಲುಸೇಟುಗಳು ಬಿದ್ದು ಗಾಯಗೊಂಡು ಮಡಿದರು.

ಕರಾಚಿ ಜೂ 17— ಕರಾಚಿಯಲ್ಲಿ ಗುಡಿಸುವವರು ಹೆಚ್ಚು ಸಂಬಳಬೇಕೆಂದು ಮುಷ್ಕರ ಹೂಡಿದಿರುವರು.

## ಸರ್. ಸಿ. ಪಿ. ಹೋಳಿಕೆ

ಶಿವಮೊಗ್ಗ, ಜೂನ್ 16— ಬ್ರಿಟಿಷ್ ಕಾಮನ್ವೆಲ್ತ್ ಸಂಬಂಧವನ್ನು ಸಂರಕ್ಷಿಸುವುದು ಭಾರತದ ಸ್ವಾತಂತ್ರ್ಯಕ್ಕೆ ಸಹಾಯಕವಾಗಿದೆಯೆಂದು ಸರ್ ಸಿ. ಪಿ. ರಾಮಸ್ವಾಮಿ ಐಯ್ಯರವರು ಇಂದು ಇಲ್ಲಿಗೆ ಪ್ರಯಾಣ ಮಾಡುವ ಮುಂಚೆ ಹೇಳಿಕೆ ಕೊಟ್ಟಿದ್ದಾರೆ.

## ಮೈಸೂರು ಸುದ್ದಿ

ಮೈಸೂರು ಜೂ 14 — ಅಖಿಲ ಭಾರತ ಕರ್ನಾಟಕ ಮತ್ತು ಮೈಸೂರು ಹಿಂದೂ ಮಹಾಸಭೆಯ ಅಧ್ಯಕ್ಷರಾದ ಶ್ರೀ ಎಸ್. ಸಿ. ಮಲ್ಲಯ್ಯನವರು ತಮ್ಮ ದಿವಾನ್ ಸರ್ ಆರ್ಕಾಟ್‌ರಂನ್ನು ಭೇಟಿ ಮಾಡಿದರು ಉತ್ತರ ಕರ್ನಾಟಕಕ್ಕೆ ವಿದ್ಯುಚ್ಛಕ್ತಿಯನ್ನು ಒದಗಿಸುವ ನಿರ್ಣಾಯದಲ್ಲಿ ಸೂಕ್ತ ಏರ್ಪಾಟುಗಳನ್ನು ಪರಿಶೀಲಿಸುವುದಾಗಿ ತಿಳಿಸಿದರು.

ಭದ್ರಾ ಬಂದರಿನ ವಿಚಾರದಲ್ಲಿ ಉತ್ತರ ಮೆಟ್ಟು ದಕ್ಷಿಣ ಕನ್ನಡ ಜಿಲ್ಲೆಯವರೂ ಬೊಂಬಾಯಿ ಸರ್ಕಾರದವರೂ ವಿರೋಧವನ್ನು ವ್ಯಕ್ತಪಡಿಸಿದ ಬಗ್ಗೆ ದಿವಾನರು ಪ್ರಸ್ತಾಪಿಸಿದ್ದರು.

ಮೈಸೂರು ಸಂಸ್ಥಾನಕ್ಕಾಗಿ ಸಭೆಗೆ ಸೇರುವ ಪ್ರಸ್ತಾಪ ಜರುಗಿತು.

ಮುಂದಿನ ರಾಜಕೀಯ ಸುಧಾರಣೆ ಸಂಬಂಧವಾಗಿ ಪುನಃ ಬೆಂಗಳೂರಿನಲ್ಲಿ ಸೇರಿ ಚರ್ಚೆ ನಡೆಸಲು ನಿರ್ಧರಿಸಿದೆ.

## ಹಿಂದೂ ಮಹಾಸಭೆ

ಕೋಲಾರ, ಜೂನ್ 16 — ಮೈಸೂರು ಸಂಸ್ಥಾನದ ಹಿಂದೂ ಮಹಾಸಭೆ ಆರ್ಗನೈಜಿಂಗ್ ಸೆಕ್ರಟರಿಗಳಾದ ಶ್ರೀ ಎಸ್. ಪುಟ್ಟುವೀರಯ್ಯನವರು ಈ ಜಿಲ್ಲೆಯ ಮುಖಂಡರಿಂದ ಆಹ್ವಾನಿತರಾಗಿ ಜಿಲ್ಲಾ ಪ್ರವಾಸವನ್ನು ಈ ತಿಂಗಳು ಅಖೈರುಗೊಳಿಸಿರುತ್ತಾರೆ. ತಾಲೂಕ್ ಸೇಟಿಯಾಲ್ಲಿ ಆರಂಭಿಸುವ ಹಿಂದೂ ಅನಾಥಾಶ್ರಮದ ಕಾರ್ಯಭಾಗಗಳನ್ನು ಮುಂದುವರಿಸಿ ಶಕ್ತ ಸೌಕರ್ಯಗಳನ್ನು ಒದಗಿಸಿಕೊಂಡು ಮುಂದಿನ ತಿಂಗಳಲ್ಲಿ ಆರಂಭಿಸುತ್ತಾರೆ. ಈ ಸಂಬಂಧವಾದ ಈ ಪ್ರವಾಸದಲ್ಲಿ ಹಿಂದೂ ಬಾಂಧವರೆಲ್ಲಾ ಪೂರ್ಣ ಸಹಕಾರವನ್ನಿತ್ತು ಪ್ರೋತ್ಸಾಹಿಸಬೇಕಾಗಿ ಕೋಲಾರ ಜಿಲ್ಲಾ ಹಿಂ || ಮ || ಸಭಾ ಸಮಿತಿಯವರು ಮನವಿ ಮಾಡಿಕೊಳ್ಳುತ್ತಾರೆ.

## ಭಾರತದ ರಾಜರುಗಳು

### ಇಂದೂರು ಮಹಾರಾಜರು

ಶ್ರೀ ಯುಶ್ವಂತರಾವ ಪವಾರ್ ರವರು 30. ಅಕ್ಸ್‌ಫರ್ಡ್ ವಿಶ್ವವಿದ್ಯಾಲಯದಲ್ಲಿ ಓದಿದ್ದಾರೆ. ಚಿಕ್ಕವಯಸ್ಸಿನಲ್ಲಿಯೇ ಹಿತರಿಗೆ ಬಹುದಾನವಾಗಿ ಕೊಡಲು ದೇಬುಗಳಲ್ಲಿ ಬಂಗಾರದ ತೈಗಡಿಹಾರಗಳನ್ನು ತಟ್ಟುಕಾಣಿಂದು ತೆರುಗುತ್ತಿದ್ದರು. ಇವರ ವಾರ್ಷಿಕ ಆದಾಯ 45 ಲಕ್ಷ. ಭೋಗ ಜೀವನ. 2 ವರೆ ಕೋಟಿ ರೂ. ವೆಚ್ಚ ಮಾಡಿ ಅರಮನೆಯನ್ನು ಕಟ್ಟಿದರು. 195 ಸಾವಿರ ರೂ. ವೆಚ್ಚ ಮಾಡಿ ಒಂದು ರೈಲ್ವೇ ಕೋಚ್ ಕೊಂಡಿರುವರು. ಅದು ಒಂದು ಚಕ್ರಗಳ ಅರಮನೆ

ಂ ಂ

### ಬರೋಡಾ ಮಹಾರಾಜರು

ಗಾಯಕವಾಡರು ಪ್ರಪಂಚದಲ್ಲಿಯ ಐಶ್ವರ್ಯವಂತರಲ್ಲಿ ಎಣಿಕೆಯವರೆಂದು ಪ್ರಸಿದ್ಧಿ. ಈತನು ವೈಭೋಗದಲ್ಲಿ ವಿಲಾಸದೊಡನೆ ಬೀಮಸೇನತ್ವವೂ ಇದೆ. ಹಾಲಿವುಡ್ ಸಿನಿಮಾದವರು ಕೂಡ ಶಿಲ್ಪಿಸಲಾರದ ಭೋಗವು ಅದು. ಇವರ ಅರಮನೆಯೊಳಗಿನ ವಾಡಿಗಳೆಲ್ಲವೂ ಶುದ್ಧ ಖಚಿತಗಳಾಗಿವೆ. ಒಂದು ಕಛೇರಿ ಚಾವಡಿಯಲ್ಲಿ ಮುತ್ತಿನ ಜಮಖಾನೆ ಹಾಸಲ್ಪಟ್ಟಿರುತ್ತದೆ. ಇನ್ನು ಅವರ ವೈಭವವು ಬಹಳವಂತಿದೆ.

### ಮಹಾ ಕೆಚಡಿ ವೀರರು

### ಹೈದರಾಬಾದು ನೈಜಾಮರು

ಇವರು ನೈಜ್ಞರು. 2600 ಕೋಟಿ ಪೌಂಡಾಯಿಗಳ ದಿಲಿಯುಳ್ಳ ಆಸಾಮಿಯೇ ಇವರ ಸುತ್ತಮುತ್ತಲೂ ರಾಜಮಂದಿರಗಳಿದ್ದರೂ, ರಾತ್ರಿ ಹೊತ್ತು ತನ್ನ ಮುದ್ದಾದ ಆಡಿಪೆ ಮರಿಯನ್ನು ಪಕ್ಕದಲ್ಲಿಟ್ಟುಕೊಂಡು ಜಗಲಿಯ( ವರಾಂಡ )ಮೇಲೆ ಮಲಗಿಕೊಳ್ಳುತ್ತಾರೆ. ಇವರು ಬಹು ಬುದ್ಧಿಶಾಲಿ. ಧನ ಸಂಚಯವನ್ನು ಮಾಡುತ್ತಲೇ ಇರುತ್ತಾರೆ. ಒರಟಾಪನೆಯ್ದ ಬಟ್ಟೆಯನ್ನು ಧರಿಸಿ ಒಂದು ಹಳೇ ಫೋರ್ಡ್ ಕಾರಿನಲ್ಲಿ ರಸ್ತೆಗಳಲ್ಲಿ ಸುತ್ತುತ್ತಾರೆ.

ಂ ಂ

### ಜಮ್ಮೂ ಕಾಶ್ಮೀರ ಮಹಾರಾಜರು ಮೊದಲಾದವರು

ವರ್ಷಕ್ಕೆ ಆದಾಯ 260 ಲಕ್ಷ ರೂ. ಈ ಕಾಶ್ಮೀರದ ರಾಜರಿಗೆ.

ವರ್ಷಕ್ಕೆ ರೂ. 60 ಆದಾಯವಿರುವ ಹಳ್ಳಿಗಳ ರಾಜರೂ ಈ ದೇಶದಲ್ಲಿದ್ದಾರೆ

ರಾಜರೆಲ್ಲರಿಗೂ ಅಮೃತಶಿಲೆಯ ಭವನಗಳಿಲ್ಲ. ಕೆಲವರಿಗೆ ಮಣ್ಣಿನ ಗೋಡೆಗಳ ಸಾಧಾರಣ ಗುಡಿಸಲುಗಳೇ ಅರಮನೆಗಳಾಗಿವೆ.


## ಐಟಿಯಾಲ್

ಟ್ರೇಡ್ ITL ಮಾರ್ಕ್

ಏಟಿಯಾಲ್ ಒಂದು ಅದ್ಭುತ ಕ್ರಿಮಿನಾಶಿನಿ. ಗೊತ್ತಾದ ಪ್ರಮಾಣದಲ್ಲಿ ನೀರಿನೊಡನೆ ಬೆರಿಸಿ, ಗಾಯಗಳನ್ನು ತೊಳೆಯುವುದು, ಬಾಯಿಲೆಯವರ ಕೊಠಡಿಗಳನ್ನು ತೊಳೆಯುವುದು, ಬಟ್ಟೆಗಳನ್ನು ಒಗೆದು ಶುಚಿ ಮಾಡುವುದು, ಇತ್ಯಾದಿ ಕೆಲಸಗಳಿಗೆ ಸೂಕ್ತವಾಗುವ ಸಂಸಾರ ಸೇವಕ.

ಹಿತವಾದ ಇದರ ವಾಸನೆಯು ಮನಸ್ಸನ್ನು ಹರ್ಷಗೊಳಿಸುವುದು.

ಎಲ್ಲಾ ಪ್ರಮುಖ ಔಷಧಿವ್ಯಾಪಾರಿಗಳಲ್ಲಿಯೂ ಸುಲಭ ಬೆಲೆಗೆ ದೊರೆಯುವುದು.

— ತಯಾರಿಕರು —

The Mysore Industrial & Testing Laboratory Ltd..

Malleswaram P. O. Bangalore



## At Opera 9th Glorious Week

## RAJAKUMARI

ಟಿ. ಎಸ್. ಬಾಲಯ್ಯ, ತಪಮಣಿದೇವಿ, ಮಾಲತಿ ರಾಘುಚಂದ್ರ ನಟಿಸಿರುವ

## ರಾಜಕುಮಾರಿ

(ತಮಿಳು)

## ಶ್ರೀ 'ಓಂ' ಗುರುತಿನ

## ಅರಿಸಿದ ಪರಿಶುದ್ಧ ಕೇಸರಿ

ಈ ಶ್ರೀ ಓಂ ಗುರುತಿನ ಕೇಸರಿಯು ಗ್ಯಾರಂಟಿಯಾಗಿ ಪರಿಶುದ್ಧವಾದುದು. ಸ್ಪೇನ್ ದೇಶದಲ್ಲಿಯು ಕೆಸರಿ ಗಿಡಗಳಿಂದ ಆರಿಸಲ್ಪಟ್ಟ ಹೂಗಳಿಂದ ಕಿತ್ತಲ್ಪಟ್ಟು ಆರಿಸ ತೆಗೆಯಲ್ಪಟ್ಟಿದಾಗಿದೆ. ಇದರಲ್ಲಿ ಎಸೆಂದು ಆಕ್ಷೇಪಣೀಯ ಪದಾರ್ಥವೂ ಸೇರಿಲ್ಲ ಮತ್ತು ಧಾರ್ಮಿಕವಾಗಿಯೂ ಪರಿಶುದ್ಧವಾದುದು. ದೇವಾಲಯಗಳಲ್ಲಿಯೂ ದೇವರ ಪೂಜೆಗೂ ಮತಾಚಾರ ಸಮಾರಂಭಗಳಲ್ಲಿಯೂ ಎಲ್ಲ ಸಂತೋಷ ಮತ್ತು ಸಾಂಘಿಕ ಕೂಟಗಳಲ್ಲಿಯೂ ಉಪಯೋಗಿಸಲ್ಪಡತಕ್ಕದ್ದಾಗಿದೆ. ಎಂದು ಶಿಪಾರಸ್ ಮಾಡಲ್ಪಟ್ಟಿದೆ

ವಲ್ಲಭದಾಸ್ ತೇಜ್‌ಪಾಲ್,

(ಹಿಂಗು, ಕೇಸರಿ ಮತ್ತು ಕಿರಾಣ ವ್ಯಾಪಾರಿಗಳು)

ಗೋವಿಂದಪ್ಪ ನಾಯಕ್ ಕಂಪೌಂಡ್, ಜಿ. ಟಿ. ಮದರಾಸು.



## SHAKTI SUDHA

### A Superb TONIC

'ಶಕ್ತಿಸುಧಾ' ಸೇವಿಸಿ ಶಕ್ತಿಯನ್ನು ಹೊಂದಿ


Edited, Printed and Publishedby M. S Krishna Rao at the Satyvadi Press Chamara Agrahar, Mysore.